**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ವಿರಾಜಪೇಟೆ**

**ಸಿ.ಸಿ. ಸಂಖ್ಯೆ 1013/2013**

**ಚಾಸಾ : 18**

**ಪ್ರಾಸಾ : 3**

| | |
|---|---|
| **ಹೆಸರು** | : ಪ್ರಕಾಶ್‌ಗೌಡ |
| **ತಂದೆಯ ಹೆಸರು** | : ಜವರೇಗೌಡ |
| **ವಯಸ್ಸು** | : 71 ವರ್ಷ |
| **ಉದ್ಯೋಗ** | : ನಿವೃತ್ತ ಸಿಪಿಐ |
| **ವಾಸಸ್ಥಳ** | : ಮೈಸೂರು |

**ದಿನಾಂಕ : 19-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಮಾನ್ಯ ಸ. ಸ. ಅ. ರವರಿಂದ :-**

1. ನಾನು ದಿನಾಂಕ 04-07-2011 ರಿಂದ 27-09-2013 ರವರೆಗೆ ಮಡಿಕೇರಿ ನಗರದಲ್ಲಿ ಸಿಪಿಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 09-09-2012 ರಂದು ಈ ಪ್ರಕರಣದ ಕಡತವನ್ನು ಚಾಸಾ17 ರವರಿಂದ ಹೊಂದಿಕೊಂಡು, ಕಡತವನ್ನು ಪರಿಶೀಲಿಸಿದ ನಂತರ ಅದೇ ದಿನ ಕೃತ್ಯ ಸ್ಥಳಕ್ಕೆ ಭೇಟಿ ನೀಡಿ, ಪಂಚರಾದ ಚಾಸಾ-1, 5 ಹಾಗೂ 6 ರವರ ಸಮಕ್ಷಮದಲ್ಲಿ ಚಾಸಾ1 ರವರು ತೋರಿಸಿಕೊಟ್ಟ ಮೇರೆಗೆ ಕೃತ್ಯ ಸ್ಥಳದಲ್ಲಿ ತೇವಾಂಶದಿಂದ ಕೂಡಿದ 100 ಗ್ರಾಂ ಒಳ್ಳೆ ಮೆಣಸು ಹಾಗೂ ಮಾದರಿಗಾಗಿ ಅರ್ಧ ಕೆಜಿ ಒಳಗಿದ ಮೆಣಸನ್ನು ಮಹಜರ ಕ್ರಮ ಜರುಗಿಸಿ, ಅಮಾನತ್ತುಪಡಿಸಿಕೊಳ್ಳಲಾಯಿತು. ಸದರಿ ಮಹಜರನ್ನು ಮಧ್ಯಾಹ್ನ 1.00 ರಿಂದ 2.00 ಗಂಟೆಯವರೆಗೆ ಜರುಗಿಸಲಾಯಿತು. ಸದರಿ ಸಮಯದಲ್ಲಿ ಭಾವಚಿತ್ರಗಳನ್ನು ತೆಗೆಸಿರುತ್ತೇನೆ. ಸದರಿ ಸಮಯದಲ್ಲಿ ಕೃತ್ಯ ಸ್ಥಳದ ಕಚ್ಚಾ ನಕಾಶೆಯನ್ನು ಸಹ ತಯಾರಿಸಿರುತ್ತೇವೆ. ನಂತರ ವಶಪಡಿಸಿಕೊಂಡ ಮಾಲನ್ನು ಸ್ವತ್ತು ಪಟ್ಟಿ ಸಂ. 76/2012 ರಂತೆ ದಾಖಲಿಸಿ, ಅದನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಅದೇ ಆರೋಪಿಗಳ ಹಾಗೂ

ಮಾಲು ಪತ್ತೆಗಾಗಿ ಸಿಬ್ಬಂದಿಗಳನ್ನು ನೇಮಿಸಿರುತ್ತೇನೆ. ನಂತರ ಅದೇ ದಿನ ಚಾಸಾ-2 ರಿಂದ 4 ರವರ ಹೇಳಿಕೆಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

3. ನಂತರ ದಿನಾಂಕ 13-09-2012 ರಂದು ಚಾಸಾ1 ರವರ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ದಿನಾಂಕ 23-08-2013 ರಂದು ಮಾಲುಪತ್ತೆಗಾಗಿ ನೇಮಕ ಮಾಡಿದ್ದ ಸಿಬ್ಬಂದಿಗಳು 1 ಹಾಗೂ 2ನೇ ಆರೋಪಿಗಳನ್ನು ಪತ್ತೆ ಹಚ್ಚಿ ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ಆರೋಪಿಗಳನ್ನು ವಿಚಾರಿಸಿ ಅವರುಗಳ ಸ್ವಇಚ್ಚ ಹೇಳಿಕೆ ದಾಖಲಿಸಿಕೊಂಡಿರುತ್ತೇನೆ. ಆ ಸಮಯದಲ್ಲಿ ಆರೋಪಿಗಳನ್ನು ವಿಚಾರ ಮಾಡಲಾಗಿ ದಿನಾಂಕ 02-06-2012 ಹಾಗೂ 08-09-2012 ರಂದು ನಮಾಸ್ಕೋ ಟ್ರೇಡರ್ಸ್ ಗೋದಾಮಿನಿಂದ 320 ಕೆಜಿ ಒಳ್ಳೆ ಮೆಣಸನ್ನು ಕಳ್ಳತನ ಮಾಡಿರುವುದಾಗಿ ಒಪ್ಪಿಕೊಂಡಿರುತ್ತಾರೆ. ಕೇರಳದ ವೈನಾಡು ಜಿಲ್ಲೆಯ ತರುವಣ ಮಳಿಗೆಯಲ್ಲಿ ಒಳ್ಳೆ ಮೆಣಸನ್ನು ಮಾರಾಟ ಮಾಡಿರುವುದಾಗಿ ತಿಳಿಸಿದ ಮೇರೆಗೆ ಸದರಿ ಸ್ಥಳಕ್ಕೆ ಆರೋಪಿಗಳ ಸ್ವಇಚ್ಚ ಹೇಳಿಕೆಯ ಮೇರೆಗೆ ಅದೇ ದಿನ ತೆರಳಿ ಮಳಿಗೆಯ ಮಾಲೀಕರು ಹಾಜರುಪಡಿಸಿದ 320 ಕೆಜಿ ಒಳ್ಳೆ ಮೆಣಸನ್ನು ಚಾಸಾ-1, 6 ಹಾಗೂ 7 ರವರ ಸಮಕ್ಷಮ ಮಹಜರ ಕ್ರಮ ಜರುಗಿಸಿ ಮೆಣಸನ್ನು ಅಮಾನತ್ತು ಪಡಿಸಿಕೊಳ್ಳಲಾಯಿತು.

4. ನಂತರ ಠಾಣೆಗೆ ಹಿಂತಿರುಗಿ 1 ಹಾಗೂ 2ನೇ ಆರೋಪಿಗಳು ಹಾಗೂ ಸ್ವತ್ತುಗಳೊಂದಿಗೆ ಠಾಣೆಗೆ ಹಿಂತಿರುಗಿ, ಠಾಣಾ ಮಾಲು ಪಟ್ಟಿ ಸಂ. 83/2013 ರಂತೆ ದಾಖಲಿಸಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ದಸ್ತಗಿರಿ ಕ್ರಮ ಜರುಗಿಸಿ, ಆರೋಪಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು. ನಂತರ ದಿನಾಂಕ 23-08-2013 ರಂದು ಚಾಸಾ1, 2, 3, 4 ಹಾಗೂ 6 ರವರ ಮುಂದುವರೆದ ಹೇಳಿಕೆಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಅದೇ ದಿನ ಚಾಸಾ7 ರವರ ಹೇಳಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ದಿನಾಂಕ 24-08-2013 ರಂದು ಸಿಬ್ಬಂದಿಗಳ ಹೇಳಿಕೆಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ದಿನಾಂಕ 04-09-2013 ರಂದು ನ್ಯಾಯಾಲಯದ ಆದೇಶ ಮೇರೆಗೆ ಅಮಾನತ್ತುಪಡಿಸಿಕೊಂಡಿದ್ದ ಮೆಣಸನ್ನು ಪಂಚರಾದ ಚಾಸಾ1 ಹಾಗೂ 6 ರವರ ಸಮಕ್ಷಮ ಜರುಗಿಸಿ ಬಿಡುಗಡೆ ಮಾಡಿರುತ್ತೇನೆ. ಸದರಿ ಸಮಯದಲ್ಲಿ ಭಾವಚಿತ್ರಗಳನ್ನು ಸಹ ತೆಗೆಸಿರುತ್ತೇನೆ.

5. ನಂತರ ದಿನಾಂಕ 07-09-2013 ರಂದು ಚಾಸಾ-2 ರವರ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಅದೇ ದಿನ ಕಛೇರಿಗೆ ಹಾಜರಾಗಿ ಕೃತ್ಯಕ್ಕೆ ಬಳಸಿದ ಕೆಎ 14 ಜಿ 6071 ನೋಂದಣಿ ಸಂಖ್ಯೆಯ ಮಾರುತಿ 800 ಕಾರನ್ನು ಅದರ ಮಾಲೀಕರು ಹಾಜರುಪಡಿಸಿದ ಮೇರೆಗೆ ಚಾಸಾ1 ಹಾಗೂ 8 ರವರ ಸಮಕ್ಷಮ ಮಹಜರ ಕ್ರಮ ಜರುಗಿಸಿ, ಸದರಿ ಕಾರನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ಕಾರನ್ನು ಠಾ ಮಾಲು ಸಂ. 91/2013 ರಂತೆ ದಾಖಲಿಸಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಸದರಿ ಕಾರನ್ನು ನ್ಯಾಯಾಲಯದ ಆದೇಶದಂತೆ ಕಾರನ್ನು ಬಿಡುಗಡೆ ಮಾಡಿ, ಭಾವಚಿತ್ರ ತೆಗೆದಿರುತ್ತೇವೆ.

6. ನಂತರ ದಿನಾಂಕ 14-09-2013 ರಂದು ತನಿಖೆ ಪೂರ್ಣಗೊಳಿಸಿ, ಆರೋಪಿತರ ವಿರುದ್ಧ ಆರೋಪ ಸಾಬೀತಾದ್ದರಿಂದ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1ನೇ ಆರೋಪಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿಯು ಕೃತ್ಯ ಸ್ಥಳದ ಮಹಜರನ್ನು ನೋಡಿ ಗುರುತಿಸಿದ್ದನ್ನು ಈಗಾಗಲೇ ನಿಪಿ2 ಎಂದು ಗುರುತಿಸಲಾಗಿದೆ. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದನ್ನು ನಿಪಿ2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಭಾವಚಿತ್ರವನ್ನು ನೋಡಿ ಗುರುತಿಸಿದ್ದನ್ನು ಈಗಾಗಲೇ ನಿಪಿ 3 ಎಂದು ಗುರುತಿಸಲಾಗಿದೆ. ಮೆಣಸು ಅಮಾನತ್ತು ಪಡಿಸುವ ಸಮಯದಲ್ಲಿ ಜರುಗಿಸಿದ ಮಹಜರನ್ನು ನೋಡಿ ಗುರುತಿಸಿದ್ದನ್ನು ಈಗಾಗಲೇ ನಿಪಿ4 ಎಂದು ಗುರುತಿಸಲಾಗಿದೆ. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದನ್ನು ನಿಪಿ4(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಕಾರು ಅಮಾನತ್ತು ಮಹಜರನ್ನು ನೋಡಿ ಗುರುತಿಸಿದ್ದನ್ನು ಈಗಾಗಲೇ ನಿಪಿ8 ಎಂದು ಗುರುತಿಸಲಾಗಿದೆ. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದನ್ನು ನಿಪಿ8(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ವತ್ತು ಅಮಾನತ್ತು ಮಹಜರನ್ನು ನೋಡಿ ಗುರುತಿಸಿದ್ದನ್ನು ಈಗಾಗಲೇ ನಿಪಿ9 ಎಂದು ಗುರುತಿಸಲಾಗಿದೆ. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದನ್ನು ನಿಪಿ9(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ವತ್ತುಗಳನ್ನು ಬಿಡಗುಡ ಮಾಡುವ ಸಮಯದಲ್ಲಿ ತೆಗೆದ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದನ್ನು ಈಗಾಗಲೇ ನಿಪಿ 5 ಹಾಗೂ 6 ಎಂದು ಗುರುತಿಸಲಾಗಿದೆ. ಸಾಕ್ಷಿಯು ಕೃತ್ಯ ಸ್ಥಳದಲ್ಲಿ ತಯಾರಿಸಿದ ಕಚ್ಚಾ ನಕಾಶೆಯನ್ನು ನೋಡಿ ಗುರುತಿಸಿದ್ದನ್ನು ನಿಪಿ10 ಎಂದು ಗುರುತಿಸಲಾಯಿತು. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದನ್ನು ನಿಪಿ10(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಅಮಾನತ್ತುಪಡಿಸಿಕೊಂಡ

ವಸ್ತುಗಳನ್ನು ನೋಡಿ ಗುರುತಿಸಿದ್ದನ್ನು ಈಗಾಗಲೇ ಮು ಮಾ 1 ಹಾಗೂ 2 ಎಂದು ಗುರುತಿಸಲಾಗಿದೆ.

ಮುಖ್ಯ ವಿಚಾರಣೆ ಮುಕ್ತಾಯ.

**ಪಾಟಿ ಸವಾಲು : 1ನೇ ಆರೋಪಿ ಪರ ಶ್ರೀ. ಸಿ ಎ ವೈ ವಕೀಲರಿಂದ ಃ**

1. ನಾನು ಸಿಬ್ಬಂದಿಗಳನ್ನು ಪ್ರಸ್ತುತ ಪ್ರಕರಣದಲ್ಲಿ ಆರೋಪಿಗಳನ್ ನುಪತ್ತೆ ಹಚ್ಚಲು ಹಾಗೂ ವಸ್ತುಗಳನ್ನು ಅಮಾನತ್ತುಪಡಿಸಿಕೊಳ್ಳಲು ಪುಸ್ತಕದಲ್ಲಿ ನಮೂದು ಮಾಡಿರುತ್ತೇನೆ. ಸದರಿ ಪುಸ್ತಕವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಸಿಬ್ಬಂದಿಗಳನ್ನು ನೇಮಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಂದೆ ಯಾವುದೇ ಆರೋಪಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ಸ್ವಇಚ್ಚ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಹಾಗೂ ಮುಂದುವರೆದ ಹೇಳಿಕೆಗಳನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಅಂಗಡಿಯಿಂದ ಒಳ್ಳೆ ಮೆಣಸನ್ನು ಅಮಾನತ್ತುಪಡಿಸಿಲ್ಲ ಎಂದರೆ ಸರಿಯಲ್ಲ. ಅಂಗಡಿಯಿದ್ದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎನ್ನುತ್ತಾರೆ.

2. ಯಾವುದೇ ವಾಹನವನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಪಂಚರ ಹೇಳಿಕೆಯನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಅಂಕಿಕೋಸ್ಕರ ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಮು ಮಾ 1 ಹಾಗೂ 2 ಈ ಪ್ರಕರಣಕ್ಕೆ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಭಾವಚಿತ್ರಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಕೃತ್ಯವನ್ನು ಎಸಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳಿಗೂ ಹಾಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ಸ್ವಇಚ್ಚ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

ಪಾಟಿ ಸವಾಲು ಮುಕ್ತಾಯ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಪ್ರದೀಪ ಪೋತದಾರ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ವಿರಾಜಪೇಟೆ